# ಕುಟುಂಬ ಮತ್ತು ಸಮುದಾಯ

ಅಧ್ಯಾಯ ೯

> ಪ್ರೀತಿ ಮತ್ತು ಧರ್ಮವು ಕೌಟುಂಬಿಕ ಜೀವನದ ಹೂವು ಮತ್ತು ಫಲವಾಗಿದೆ.
>
> - ತಿರುವಳ್ಳುವರ್

**ಕೆಲವು ಮುಖ್ಯ ಪ್ರಶ್ನೆಗಳು: ?**

೧. ಕುಟುಂಬದ ಏಕತೆಯು ಏಕೆ ಮುಖ್ಯ?

೨. ಸಮುದಾಯವೆಂದರೇನು? ಅದರ ಪಾತ್ರವೇನು?

0681CH09

## ಕುಟುಂಬ:

ಬಹುತೇಕ ನಾವೆಲ್ಲರೂ ಒಂದೇ ಕುಟುಂಬದಲ್ಲಿ ವಾಸಿಸುತ್ತೇವೆ. ಕುಟುಂಬವು ಯಾವುದೇ ಸಮಾಜದ ಮೂಲಭೂತ, ಅತ್ಯಂತ ಪ್ರಾಚೀನ ಘಟಕವಾಗಿದೆ. ಇಂದು ಭಾರತೀಯ ಸಮಾಜದಲ್ಲಿ ಅವಿಭಕ್ತ ಕುಟುಂಬಗಳಿಂದ ಹಿಡಿದು ವಿಭಕ್ತ ಕುಟುಂಬಗಳವರೆಗೆ ಹಲವಾರು ರೀತಿಯ ಕುಟುಂಬಗಳಿವೆ. ಅವಿಭಕ್ತ ಕುಟುಂಬದಲ್ಲಿ ಹಲವಾರು ತಲೆಮಾರುಗಳು ಒಟ್ಟಿಗೆ ವಾಸಿಸುತ್ತವೆ- ಅಜ್ಜ-ಅಜ್ಜಿಯರು, ಪೋಷಕರು, ಚಿಕ್ಕಪ್ಪ ಮತ್ತು ಚಿಕ್ಕಮ್ಮ, ಸಹೋದರರು,





ಅವಿಭಕ್ತ ಕುಟುಂಬಗಳ ಉದಾಹರಣೆಗಳು

© NCERT not to be republished

[redacted]

ವಿಬಕ್ತ ಕುಟುಂಬಗಳ ಉದಾಹರಣೆಗಳು

ಸಹೋದರಿಯರು ಮತ್ತು ಸೋದರಸಂಬಂಧಿಗಳು. ಮತ್ತೊಂದೆಡೆ ವಿಭಕ್ತ ಕುಟುಂಬದಲ್ಲಿ ದಂಪತಿಗಳು ಮತ್ತು ಅವರ ಮಕ್ಕಳಿಗೆ ಮಾತ್ರ ಸೀಮಿತವಾಗಿರುತ್ತದೆ. ಕೆಲವೊಮ್ಮೆ ಒಬ್ಬ ಪೋಷಕರು ಮತ್ತು ಮಕ್ಕಳಿಗೆ ಸೀಮಿತವಾಗಿರುತ್ತದೆ.

## ಇದನ್ನು ಅನ್ವೇಷಿಸೋಣ:

→ ನಿಮ್ಮ ನೆರೆಹೊರೆಯಲ್ಲಿ ನೀವು ಯಾವ ರೀತಿಯ ಕುಟುಂಬಗಳನ್ನು ನೋಡುತ್ತೀರಿ? ಪ್ರತಿ ಕುಟುಂಬದ ಪ್ರಕಾರಕ್ಕೆ ಮನೆಗಳ ಸಂಖ್ಯೆಯೊಂದಿಗೆ ಪ್ರಕಾರವನ್ನು ಪಟ್ಟಿ ಮಾಡಿ.

→ ಯಾವ ಕುಟುಂಬದ ವಿಧಗಳು ಹೆಚ್ಚಾಗಿ ಕಂಡುಬರುತ್ತವೆ? ಇದು ಏಕೆ ಎಂದು ನೀವು ಭಾವಿಸುತ್ತೀರಿ?

→ ತರಗತಿಯ ಚಟುವಟಿಕೆಯಾಗಿ ನಿಮ್ಮ ಸಹಪಾಠಿಗಳ ಸಂಶೋಧನೆಗಳೊಂದಿಗೆ ಹೋಲಿಸಿ ಮತ್ತು ಚರ್ಚಿಸಿ.

ಇಂಗ್ಲಿಷನಲ್ಲಿ ಕುಟುಂಬ ಸಂಬಂಧಗಳನ್ನು ವಿವರಿಸಲು ಹೆಚ್ಚಿನ ಪದಗಳಿಲ್ಲ. ಅವುಗಳಲ್ಲಿ ಕೆಲವನ್ನು ನಾವು ಮೊದಲ ಪ್ಯಾರಾಗ್ರಾಫನಲ್ಲಿ ನೋಡಿದ್ದೇವೆ. ಭಾರತೀಯ ಭಾಷೆಗಳಿಗೆ ಇನ್ನೂ ಅನೇಕ ಪದಗಳಿವೆ. ಉದಾಹರಣೆಗೆ ಹಿಂದಿಯಲ್ಲಿ ಬುವಾ, ತೌ, ತೈ, ಚಾಚಾ, ಮೌಸಿ, ನಾನಾ, ನಾನಿ ಮತ್ತು ಇನ್ನೂ ಅನೇಕ ಇವೆ. ತಮಿಳಿನಂತಹ ಕೆಲವು ಭಾಷೆಗಳಲ್ಲಿ ಹಿರಿಯ ಸಹೋದರ/ ಸಹೋದರಿ ಅಥವಾ ಕಿರಿಯ ಸಹೋದರ / ಸಹೋದರಿಗೆ ವಿಭಿನ್ನ ಪದಗಳನ್ನು ಹೊಂದಿವೆ. ಆದರೆ ಭಾರತೀಯ ಭಾಷೆಯಲ್ಲಿ 'ಸೋದರ ಸಂಬಂಧಿ' ಎಂಬ ಪದ ಯಾವುದು? ಹೆಚ್ಚಿನ ಭಾರತೀಯ ಭಾಷೆಗಳಲ್ಲಿ, ಅಂತಹ ಯಾವುದೇ ಪದವಿಲ್ಲ ಎಂದು ನೀವು ಕಾಣಬಹುದು. ಏಕೆಂದರೆ ಸೋದರಸಂಬಂಧಿಗಳು ಕೇವಲ 'ಸಹೋದರರು' ಮತ್ತು 'ಸಹೋದರಿಯರು'. ಇದು ಎಲ್ಲರ ನಡುವಿನ ಆಳವಾದ ಸಂಬಂಧಗಳನ್ನು ಒತ್ತಿಹೇಳುತ್ತದೆ.

© NCERT not to be republished

## ನಾವೀಗ ಅನ್ವೇಷಿಸೋಣ

→ ನಿಮ್ಮ ದೂರದ ಸಂಬಂಧಿಕರು ಸೇರಿದಂತೆ ನಿಮ್ಮ ಕುಟುಂಬದ ಎಲ್ಲಾ ಸದಸ್ಯರ ಪಟ್ಟಿಯನ್ನು ಮಾಡಿ. ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಅವುಗಳ ಪದಗಳನ್ನು ಪಟ್ಟಿ ಮಾಡಿ. ಇಂಗ್ಲಿಷನಲ್ಲಿ ಸಮಾನವಾದದನ್ನು ಪದ ಕಂಡುಹಿಡಿಯಲು ಪ್ರಯತ್ನಿಸಿ. ಹಿಂದಿಗೆ ಎರಡು ಉದಾಹರಣೆಗಳು ಕೆಳಗೆ ಇವೆ:

| ಹೆಸರು | ಹಿಂದಿಯಲ್ಲಿ ಪದ | ಇಂಗ್ಲಿಷ್‌ನಲ್ಲಿ ವಿವರಣೆ / ಪದ |
|---|---|---|
| ರಾಣಿ | ತಂಗಿ(बहन) | ತಾಯಿಯ ಸಹೋದರನ ಮಗಳು (ಸೋದರಸಂಬಂಧಿ) (ಇತರ ಸಂಭಾವ್ಯ ಅರ್ಥಗಳ ನಡುವೆ) |
| ಸಮೀರ್ | ತಂದೆಯ ಚಿಕ್ಕಪ್ಪ (चाचा) | ತಂದೆಯ ಕಿರಿಯ ಸಹೋದರ (ಚಿಕ್ಕಪ್ಪ) |
| | | |

→ ಆಗಾಗ್ಗೆ, ನಿಮ್ಮ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಒಂದೇ ಪದಕ್ಕೆ ನಿಖರವಾದ ವ್ಯಾಖ್ಯಾನವನ್ನು ನೀಡಲು ಇಂಗ್ಲಿಷ್‌ನಲ್ಲಿ ಹಲವಾರು ಪದಗಳು ಬೇಕಾಗುತ್ತವೆ ಎಂಬುದನ್ನು ಗಮನಿಸಿ.

## ಪಾತ್ರಗಳು ಮತ್ತು ಜವಾಬ್ದಾರಿಗಳು

ಕುಟುಂಬ ಸದಸ್ಯರ ನಡುವಿನ ಸಂಬಂಧಗಳು ಪ್ರೀತಿ, ಕಾಳಜಿ, ಸಹಕಾರ ಮತ್ತು ಪರಸ್ಪರ ಅವಲಂಬನೆಯನ್ನು ಆಧರಿಸಿರುತ್ತವೆ. 'ಸಹಕಾರ' ಎಂದರೆ 'ಒಟ್ಟಾಗಿ ಕೆಲಸ ಮಾಡುವುದು' ಎಂದರ್ಥ. ಕುಟುಂಬದ ಪ್ರತಿಯೊಬ್ಬ ಸದಸ್ಯರು ಇತರ ಸದಸ್ಯರ ಬಗ್ಗೆ ಕಾಳಜಿಯ ಪಾತ್ರ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತಾರೆ. ಉದಾಹರಣೆಗೆ, ಪೋಷಕರು ತಮ್ಮ ಮಕ್ಕಳನ್ನು ಒಳ್ಳೆಯ ವ್ಯಕ್ತಿಗಳು ಮತ್ತು ಸಮಾಜದ ಜವಾಬ್ದಾರಿಯುತ ಸದಸ್ಯರಾಗಿ ಬೆಳೆಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆದರೆ, ಮಕ್ಕಳು ಬೆಳೆದಂತೆ, ಅವರು ಕುಟುಂಬದ ಇತರ ಸದಸ್ಯರಿಗೆ ಸಹಾಯ ಮಾಡಲು ಮನೆಯಲ್ಲಿ ಹೆಚ್ಚಿನ ಜವಾಬ್ದಾರಿಗಳನ್ನು ತೆಗೆದುಕೊಳ್ಳುತ್ತಾರೆ. ಪೋಷಕರು ಅಥವಾ ಸಹೋದರಿ ಅಥವಾ ಸಹೋದರ ಇತ್ಯಾದಿಗಳು. ದೈನಂದಿನ ಅಭ್ಯಾಸದ ಮೂಲಕ, ಮಕ್ಕಳು ಕುಟುಂಬದ ಜೀವನಕ್ರಮದಲ್ಲಿ ಭಾಗವಹಿಸಲು ಕಲಿಯುತ್ತಾರೆ. ಅನೇಕ ಮನೆಗಳಲ್ಲಿ ಮಕ್ಕಳು ತಮ್ಮ ಕುಟುಂಬವು ಕೆಲವು ಸಂಪ್ರದಾಯ ಮತ್ತು ಅಭ್ಯಾಸಗಳನ್ನು ತಲೆಮಾರುಗಳಿಂದ ಅನುಸರಿಸುತ್ತಿರುವುದನ್ನು ಸಹ ಕಲಿಯುತ್ತಾರೆ

© NCERT not to be republished

## ನಾವೀಗ ಅನ್ವೇಷಿಸೋಣ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ ಮತ್ತು ನಿಮ್ಮ ಉತ್ತರಗಳನ್ನು ಕೆಲವು ಸಹಪಾಠಿಗಳೊಂದಿಗೆ ಹೋಲಿಸಿ:

→ ಸಂತೆಯಿಂದ ಏನನ್ನು ಖರೀದಿಸಿ ತರಬೇಕೆಂದು ನಿಮ್ಮ ಕುಟುಂಬದಲ್ಲಿ ಯಾರು ನಿರ್ಧರಿಸುತ್ತಾರೆ?

→ ನಿಮ್ಮ ಮನೆಯಲ್ಲಿ ಯಾರು ಅಡುಗೆ ಮಾಡುತ್ತಾರೆ?

→ ನಿಮ್ಮ ಕುಟುಂಬದಲ್ಲಿ ಅತ್ಯಂತ ಹಿರಿಯ ವ್ಯಕ್ತಿ ಯಾರು?

→ ನಿಮ್ಮ ಮನೆಯಲ್ಲಿ ನೆಲವನ್ನು ಯಾರು ಸ್ವಚ್ಛಗೊಳಿಸುತ್ತಾರೆ?

→ ನಿಮ್ಮ ಮನೆಯಲ್ಲಿ ಪಾತ್ರೆಗಳನ್ನು ಯಾರು ತೊಳೆಯುತ್ತಾರೆ?

→ ನಿಮ್ಮ ಮನೆಕೆಲಸ ಮಾಡಲು ಯಾರು ನಿಮಗೆ ಸಹಾಯ ಮಾಡುತ್ತಾರೆ?

ನಮ್ಮ ಧರ್ಮವನ್ನು ಅನುಸರಿಸುವುದು ಅಥವಾ ನಮ್ಮ ಕರ್ತವ್ಯವನ್ನು ಮಾಡುವುದು ಭಾರತೀಯ ಸಂಸ್ಕೃತಿಯ ಪ್ರಮುಖ ತತ್ವವಾಗಿದೆ. ಕುಟುಂಬವು ಒಂದು 'ಶಾಲೆ'ಯಾಗಿದ್ದು, ಅಲ್ಲಿ ಮಕ್ಕಳು ಅಹಿಂಸೆ ಹಾಗೂ ದಾನ (ಕೊಡುವುದು), ಸೇವಾ (ಕಾಯಕ) ಮತ್ತು ತ್ಯಾಗ (ಸಮರ್ಪಣೆ) ಇತ್ಯಾದಿಗಳಂತಹ ಪ್ರಮುಖ ಮೌಲ್ಯಗಳನ್ನು, ಕಲಿಯುತ್ತಾರೆ. ಕುಟುಂಬದ ಅಗತ್ಯಗಳನ್ನು ನೋಡಿಕೊಳ್ಳಲು ಕುಟುಂಬದಲ್ಲಿನ ವ್ಯಕ್ತಿಗಳು ಹೆಚ್ಚಾಗಿ ತಮ್ಮ ಸ್ವಂತ ಅಗತ್ಯಗಳನ್ನು ತ್ಯಜಿಸುತ್ತಾರೆ.

ಅಂತಹ ಒಂದು ಕಥೆಯನ್ನು ನೋಡೋಣ.



ಶಾಲಿನಿಯು ತನ್ನ ಕುಟುಂಬದೊಂದಿಗೆ ಕೇರಳದ ಪಟ್ಟಣವೊಂದರಲ್ಲಿ ವಾಸಿಸುತ್ತಿದ್ದಾಳೆ. ಆಕೆಯ ತಂದೆ ಸಣ್ಣ ವ್ಯವಹಾರವನ್ನು ಮಾಡುತ್ತಿದ್ದಾರೆ ಮತ್ತು ಅವರ ತಾಯಿ ಹತ್ತಿರದ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. ಶಾಲಿನಿಗೆ ಒಬ್ಬ ಕಿರಿಯ ಸಹೋದರನಿದ್ದಾನೆ. ಅವರ ಅಜ್ಜಿ,-(ಅಚ್ಚಮ್ಮ) (ತಂದೆಯ ತಾಯಿ), ಚಿಕ್ಕಮ್ಮ (ತಂದೆಯ ಸಹೋದರ ಅಥವಾ ತಂದೆಯ

not to be republished

ಚಿಕ್ಕಪ್ಪ) ಮತ್ತು ಅವಳ ಚಿಟ್ಟಿ (ಚಿಕ್ಕಮ್ಮ ಅಥವಾ ಚಿಕ್ಕಪ್ಪನ ಹೆಂಡತಿ) ಅವರೊಂದಿಗೆಯೇ ವಾಸಿಸುತ್ತಿದ್ದಾರೆ. ಅವರಿಗೆ ಶಾಲಿನಿಯ ಸೋದರಸಂಬಂಧಿಯಾದ ಒಬ್ಬಳು ಮಗಳು ಇದ್ದಾಳೆ, ಅವಳನ್ನು ಅವಳು ಪ್ರೀತಿಯಿಂದ ಚಿನ್ನಿ ಎಂದು ಕರೆಯುತ್ತಾಳೆ. ಶಾಲಿನಿಯ ಚಿಕ್ಕಪ್ಪ ಈಗಷ್ಟೇ ಕೆಲಸ ಕಳೆದುಕೊಂಡಿದ್ದಾರೆ ಮತ್ತು ಅವರ ಚಿಕ್ಕಮ್ಮ ಗೃಹಿಣಿ ಆಗಿದ್ದಾಳೆ. ಇಡೀ ಕುಟುಂಬವು ಓಣಂ ಹಬ್ಬಕ್ಕೆ ತಯಾರಿ ನಡೆಸುತ್ತಿತ್ತು. ತನ್ನ ಸಹೋದರನಿಗೆ ಆರ್ಥಿಕ ತೊಂದರೆಗಳಿವೆ, ಆದ್ದರಿಂದ ಹಬ್ಬಕ್ಕೆ ಹೊಸ ಬಟ್ಟೆಗಳನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ ಎಂದು ಅಜ್ಜಿ ಶಾಲಿನಿಯ ತಂದೆಗೆ ತಿಳಿಸಿದರು.

ಶಾಲಿನಿಯ ಪೋಷಕರು ಅವಳನ್ನು ಮತ್ತು ಅವಳ ಸಹೋದರನನ್ನು ಖರೀದಿಗೆ ಕರೆದೊಯ್ದಾಗ, ಅವರು ತಮಗಾಗಿ ಮಾತ್ರವಲ್ಲ, ಚಿಕ್ಕಪ್ಪ, ಚಿಟ್ಟಿ ಮತ್ತು ಚಿನ್ನಿಗೂ ಹೊಸ ಬಟ್ಟೆಗಳನ್ನು ಖರೀದಿಸಿದರು. ಪರಿಣಾಮವಾಗಿ, ಶಾಲಿನಿಗೆ ಅವಳು ನಿರೀಕ್ಷಿಸಿದ ರೇಷ್ಮೆ ಉಡುಗೆ ಸಿಗಲಿಲ್ಲ; ಅವಳು ಸರಳವಾದ ಹತ್ತಿಯ ಬಟ್ಟೆಗೆ ಹೊಂದಿಕೊಳ್ಳಬೇಕಾಗಿತ್ತು. ಆಗ ಅಜ್ಜಿ ಕುಟುಂಬಗಳು ಪರಸ್ಪರ ಬೆಂಬಲಿಸುತ್ತವೆ ಮತ್ತು ತಮ್ಮಲ್ಲಿರುವದನ್ನು ಹಂಚಿಕೊಳ್ಳುತ್ತವೆ ಎಂದು ಶಾಲಿನಿಗೆ ವಿವರಿಸಿದರು. ಆಗ ಶಾಲಿನಿ ತನ್ನ ಸರಳ ಉಡುಗೆಗೆ ತಲೆಕೆಡಿಸಿಕೊಳ್ಳಲಿಲ್ಲ. ಪ್ರತಿಯೊಬ್ಬರೂ ಕೆಲವು ಹೊಸ ಬಟ್ಟೆಗಳನ್ನು ಪಡೆಯಬಹುದು ಎಂದು ಅವಳು ಸಂತೋಷಪಟ್ಟಳು.

## ನಾವೀಗ ಅನ್ವೇಷಿಸೋಣ

- → ಏಳು ಸದಸ್ಯರಿರುವ ಈ ಕುಟುಂಬದ ಒಂದು ಸರಳ ಮರದ ಚಿತ್ರವನ್ನು ರಚಿಸಿ.
- → ಶಾಲಿನಿಯ ಪೋಷಕರು ಎಲ್ಲರಿಗೂ ಬಟ್ಟೆಗಳನ್ನು ಖರೀದಿಸಿದ್ದಾರೆ ಎಂದು ನೀವು ಏಕೆ ಭಾವಿಸುತ್ತೀರಿ?
- → ನೀವು ಶಾಲಿನಿಯ ಸ್ಥಾನದಲ್ಲಿದ್ದರೆ ಏನು ಮಾಡುತ್ತಿದ್ದಿರಿ?

ಆ ಕಥೆಯನ್ನು ಕೇರಳದಿಂದ ರಚಿಸಲಾಗಿತ್ತು. ನಾವೀಗ ಈಶಾನ್ಯಕ್ಕೆ, ಮೇಘಾಲಯದ ಒಂದು ಹಳ್ಳಿಗೆ ಪ್ರಯಾಣಿಸೋಣ.

ನನ್ನ ಹೆಸರು ತೇನ್ ಜಿಂಗ್. ಜೀವನವು ಕೆಲವೊಮ್ಮೆ ಕಷ್ಟಕರವಾಗಿದ್ದರೂ ನಾವು ವಾಸಿಸುವ ಪರ್ವತಗಳನ್ನು ನಾನು ಪ್ರೀತಿಸುತ್ತೇನೆ. ನನ್ನ ತಂದೆ ಸಣ್ಣ ದಿನಸಿ ಅಂಗಡಿಯನ್ನು ನಡೆಸುತ್ತಿದ್ದಾರೆ. ನನ್ನ ತಾಯಿ ಸ್ಥಳೀಯ ಕರಕುಶಲ ಸಹಕಾರ ಸಂಘದಲ್ಲಿ ನಿರತರಾದ ನಂತರ ನಮ್ಮ ಸುಂದರವಾದ ಸಾಂಪ್ರದಾಯಿಕ ಬಟ್ಟೆಗಳು, ಮರದ ಕೆತ್ತನೆಗಳು ಮತ್ತು ಇತರ ವಸ್ತುಗಳನ್ನು ಪ್ರವಾಸಿಗರಿಗೆ ಮಾರಾಟ ಮಾಡಲು ಮಾಡಲು ಆರಂಭಿಸಿದೇವು. ನನ್ನ ತಂದೆಯು ಮನೆಯನ್ನು ಸ್ವಚ್ಛಗೊಳಿಸಲು, ಸಣ್ಣ ತರಕಾರಿ ತೋಟ ಮತ್ತು ಇತರ ಮನೆಕೆಲಸಗಳನ್ನು ನೋಡಿಕೊಳ್ಳುವಲ್ಲಿ ಸಹಾಯ ಮಾಡುವರು. ಆಗಾಗ್ಗೆ, ಅವರು

© NCERT not to be republished





ನಮ್ಮೆಲ್ಲರಿಗೂ ಅಡುಗೆಯನ್ನು ಮಾಡಲು ನಮ್ಮ ಅಜ್ಜಿಗೂ ಸಹಾಯ ಮಾಡುತ್ತಾರೆ.

ನನಗೆ ಅಜ್ಜಿಯು ಯಾವಾಗಲೂ ಹಾಸ್ಯ ಮತ್ತು ಬುದ್ಧಿವಂತಿಕೆಯ ಎಲ್ಲಾ ರೀತಿಯ ಆಸಕ್ತಿದಾಯಕ ಕಥೆಗಳನ್ನು ಹೇಳುತ್ತಾರೆ. ಅವರಿಗಿಂತ ಉತ್ತಮವಾಗಿ ಯಾರೂ ಜನರನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅಜ್ಜ ನನ್ನ ಮನೆಕೆಲಸದಲ್ಲಿ ನನಗೆ ಸಹಾಯ ಮಾಡುತ್ತಾರೆ. ನನ್ನನ್ನು ಶಾಲಾ ಬಸ್ಸ ನಿಲ್ದಾಣಕ್ಕೆ ಕರೆದೊಯ್ಯುತ್ತಾರೆ. ಅವರು ನಮ್ಮ ಕಾಲೋನಿಯಲ್ಲಿ ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಯಾವಾಗಲೂ ಇತರರಿಗೆ ತಮ್ಮ ಸಹಾಯವನ್ನು ನೀಡುತ್ತಿರುತ್ತಾರೆ. ಉದಾಹರಣೆಗೆ: ನಮ್ಮ ಪ್ರದೇಶದಲ್ಲಿ ವಿದ್ಯುತ್ ವೈಫಲ್ಯ ಉಂಟಾದಾಗ, ಅವರು ಹೋಗಿ ಹತ್ತಿರದ ಕಚೇರಿಗೆ ದೂರು ದಾಖಲಿಸುತ್ತಾರೆ. ನಮ್ಮ ನೆರೆಹೊರೆಯವರ ಮನೆ ಚಂಡಮಾರುತದಿಂದ ಹಾನಿಗೊಳಗಾದಾಗ, ಅವರು ದುರಸ್ತಿಗೆ ಸಹಾಯ ಮಾಡಲು ಇಡೀ ನೆರೆಹೊರೆಯಿಂದ ಸ್ವಲ್ಪ ಹಣವನ್ನು ಸಂಗ್ರಹಿಸಿದರು.

ನನ್ನ ಪೋಷಕರು ಆಹಾರ ಮತ್ತು ಬಟ್ಟೆಯಂತಹ ನಮ್ಮ ಮೂಲಭೂತ ಅವಶ್ಯಕತೆಗಳನ್ನು ನೋಡಿಕೊಳ್ಳುವುದು ನಮ್ಮ ಅದೃಷ್ಟ. ಕುಟುಂಬದಲ್ಲಿ ಯಾವುದೇ ವೆಚ್ಚಗಳು ಬಂದಾಗ, ಅವರು ಅದರ ಕುರಿತು ಚರ್ಚಿಸುವುದನ್ನು ನಾನು ಆಗಾಗ ನೋಡಿದ್ದೇನೆ. ಭವಿಷ್ಯದಲ್ಲಿ ಉದ್ಭವಿಸಬಹುದಾದ ಯಾವುದೇ ಅನಿರೀಕ್ಷಿತ ಅಗತ್ಯಗಳಿಗಾಗಿ ನಾವು ಯಾವಾಗಲೂ ಸ್ವಲ್ಪ ಹಣವನ್ನು ಉಳಿಸಲು ಪ್ರಯತ್ನಿಸಬೇಕು ಎಂದು ತಾಯಿ ಹೇಳುತ್ತಾರೆ.

## ಇದರ ಕುರಿತು ಆಲೋಚಿಸಿ

- ತೇನ್‌ಜಿಂಗ್‌ನ ತಂದೆ ವಿಶೇಷ ವೆಚ್ಚಗಳಿಗಾಗಿ ತನ್ನ ಹೆಂಡತಿಯನ್ನು ಏಕೆ ಸಂಪರ್ಕಿಸುತ್ತಾನೆ?
- ತೇನ್ ಜಿಂಗ್‌ನ ತಂದೆಯು ಮನೆಕೆಲಸಗಳಲ್ಲಿ ಭಾಗವಹಿಸುವಿಕೆಯ ಬಗ್ಗೆ ನಿಮಗೇನು ಅನಿಸುತ್ತದೆ?
- ಅಜ್ಜಿಯು ಮನೆಯಲ್ಲಿ ಯಾವ ಪಾತ್ರಗಳನ್ನು ಪೂರೈಸುತ್ತಾರೆ?



not to be republished © NCERT

## ನಾವೀಗ ಅನ್ವೇಷಿಸೋಣ

- → ಕೆಲವು ಕುಟುಂಬಗಳು ತಮ್ಮ ಮೌಲ್ಯಗಳನ್ನು ಅನುಸರಿಕೊಂಡು ಬರುತ್ತಿರುವ, ಭಾರತದ ಯಾವುದಾದರೂ ಪ್ರದೇಶದ ಕುಟುಂಬವೊಂದರ ಕಥೆಯನ್ನು ರಚಿಸಿ. ಬರವಣಿಗೆ ಅಥವಾ ರೇಖಾಚಿತ್ರದ ಮೂಲಕ ಅದನ್ನು ನಿಮ್ಮ ತರಗತಿಯಲ್ಲಿ ಹಂಚಿಕೊಳ್ಳಿ.
- → ಎರಡು ಅಥವಾ ಮೂರು ಕುಟುಂಬಗಳ ಕೇಂದ್ರಿಕರಿಸಿ ನಿಮ್ಮ ಎಲ್ಲಾ ಸಹಪಾಠಿಗಳೊಂದಿಗೆ ಒಂದು ಸಣ್ಣ ನಾಟಕವನ್ನು ರಚಿಸಿ. ನೀವು ಬರೆಯುವ ನಾಟಕವು ಕುಟುಂಬಗಳು ಎದುರಿಸಿದ ಕೆಲವು ಸವಾಲಿನ ಸಂದರ್ಭಗಳನ್ನು ಒಳಗೊಂಡಿರಬಹುದು ಮತ್ತು ಅವರು ಅವುಗಳನ್ನು ಹೇಗೆ ಪರಿಹರಿಸಬಹುದೆಂದು ತೋರಿಸುವುದಾಗಿರಬಹುದು.
- → ಶಾಲಿನಿ ಮತ್ತು ತೇನ್‌ಜಿಂಗ್ ಅವರ ಕಥೆಗಳಲ್ಲಿ ನಾವು ಅವಿಭಕ್ತ ಕುಟುಂಬಗಳ ಉದಾಹರಣೆಗಳನ್ನು ನೋಡುತ್ತೇವೆ. ಕೆಲವು ದಂಪತಿಗಳು ವಿಭಕ್ತ ಕುಟುಂಬವನ್ನು ಆಯ್ಕೆ ಮಾಡಲು ಕಾರಣವಾದ ಆಧುನಿಕ ಜೀವನ ಶೈಲಿಯ ಅಂಶಗಳು ಯಾವುವು ಎಂದು ನೀವು ಭಾವಿಸುತ್ತೀರಿ? ಎರಡು ರೀತಿಯ ಕುಟುಂಬಗಳ ಕೆಲವು ಅನುಕೂಲಗಳು ಮತ್ತು ಅನಾನುಕೂಲಗಳು ಯಾವುವು ತಿಳಿಸಿ?

# ಸಮುದಾಯ

ಕುಟುಂಬಗಳು ತಮ್ಮೊಳಗೆ ಮಾತ್ರವಲ್ಲದೇ ಇತರ ಕುಟುಂಬಗಳೊಂದಿಗೆ, ತಮ್ಮ ಸುತ್ತಲಿನ ಜನರೊಂದಿಗೆ ಸಂಪರ್ಕ ಹೊಂದಿರುತ್ತವೆ. ಹಾಗೆ ಸಂಪರ್ಕಗೊಂಡಿರುವ ಜನರ ಗುಂಪನ್ನು 'ಸಮುದಾಯ' ಎಂದು ಕರೆಯಬಹುದು("ಸಮುದಾಯ" ಎಂಬ ಪದಕ್ಕೆ ಇನ್ನೂ ಅನೇಕ ಅರ್ಥಗಳು ಇವೆ, ಅದು ವಿಷಯಾನುಸಾರ ಬದಲಾಗುತ್ತಿರುತ್ತದೆ). ಹಬ್ಬಗಳನ್ನು ಆಚರಿಸುವುದು, ಮದುವೆ, ಇತರ ಕಾರ್ಯಕ್ರಮಗಳನ್ನು ಆಯೋಜಿಸುವುದು- ವಿವಿಧ ಕಾರಣಗಳಿಗಾಗಿ ಸಮುದಾಯದ ಸದಸ್ಯರು ಒಟ್ಟುಗೂಡುತ್ತಾರೆ. ಕೆಲವು ಹಳ್ಳಿಗಳಲ್ಲಿ, ಜನರು ಭೂಮಿಯನ್ನು ಸಿದ್ಧಪಡಿಸುವುದು, ಬಿತ್ತನೆ ಮತ್ತು ರಾಶಿಯಂತಹ ಕೃಷಿ ಪದ್ಧತಿಗಳೊಂದಿಗೆ ಪರಸ್ಪರ ಸಹಾಯ ಮಾಡಲು ಒಗ್ಗೂಡುತ್ತಾರೆ. ಕಾಲಾನಂತರದಲ್ಲಿ ಸಮುದಾಯಗಳು ನೈಸರ್ಗಿಕ ಸಂಪತ್ತಿನ ಹಂಚಿಕೆ, ನೀರು, ಮೇವು ಮತ್ತು ಅರಣ್ಯ ಉತ್ಪನ್ನಗಳಂತಹ ಸಂಪನ್ಮೂಲಗಳ ಬಳಕೆಯ ಬಗ್ಗೆ ಕೆಲವು ರೂಢಿಗಳನ್ನು ಒಪ್ಪಿಕೊಂಡರು. ಅನೇಕ ಬುಡಕಟ್ಟು ಸಮುದಾಯಗಳ ವಿಷಯದಲ್ಲೂ ಇದೇ ಆಗಿದೆ. ಇದು ಇಂದು ಸ್ವಲ್ಪ ಮಟ್ಟಿಗೆ

© NCERT not to be republished

ಗ್ರಾಮೀಣ ಭಾರತದ ಗ್ರಾಮ ಸಮುದಾಯಗಳಲ್ಲಿ ಉಳಿದಿದೆ. ಅಂತಹ ರೂಢಿಗಳನ್ನು ನಾವು 'ನಿಯಮಗಳು' ಎಂದು ಕರೆಯಬಹುದು. ಆದರೆ ಅವುಗಳ ಕುರಿತು ಬರವಣಿಗೆ ದಾಖಲೆಗಳು ವಿರಳ. ಸಮುದಾಯಗಳ ಸಂಪನ್ಮೂಲಗಳಿಗೆ ಸುರಕ್ಷಿತ ಭಾವವನ್ನು ಒದಗಿಸಿದೆ. ಆದರೆ ಸಮುದಾಯದೊಳಗಿನ ಎಲ್ಲಾ ಕುಟುಂಬಗಳು ಮತ್ತು ವ್ಯಕ್ತಿಗಳು ನಿರ್ವಹಿಸಲು ನಿರ್ದಿಷ್ಟ ಕರ್ತವ್ಯಗಳನ್ನು ಹೊಂದಿದ್ದಾರೆ ಎಂದು ಇದರ ಅರ್ಥ. ಇಲ್ಲದಿದ್ದರೆ, ಸಮುದಾಯವು ಸುಗಮವಾಗಿ ಕಾರ್ಯನಿರ್ವಹಿಸುವುದಿಲ್ಲ.

## ಇದನ್ನು ತಪ್ಪಿಸಬೇಡಿ

- ಮಧ್ಯಪ್ರದೇಶದ ಝಾಬುವಾ ನಗರದ ಸುತ್ತಮುತ್ತಲಿನ ಪ್ರದೇಶವು ವರ್ಷದಿಂದ ವರ್ಷಕ್ಕೆ ತೀವ್ರ ನೀರಿನ ಬಿಕ್ಕಟ್ಟಿನಿಂದ ಬಳಲುತ್ತಿತ್ತು. ಬಿಕ್ಕಟ್ಟಿನ ಸಂದರ್ಭದಲ್ಲಿ ಯಾವುದೇ ವ್ಯಕ್ತಿ ಅಥವಾ ಕುಟುಂಬವನ್ನು ಬೆಂಬಲಿಸಲು, ಒಗ್ಗೂಡಲು ಅವರ ಹಲ್ಮಾ (ಮುಖಪುಟವನ್ನು ನೋಡಿ) ಸಂಪ್ರದಾಯವನ್ನು ಅನುಸರಿಸಿದರು. ಭಿಲ್ ಸಮುದಾಯವು ನೂರಾರು ಹಳ್ಳಿಗಳಲ್ಲಿ ಸಾವಿರಾರು ಮರಗಳನ್ನು ನೆಡಲು ನಿರ್ಧರಿಸಿತು. ಭಿಲ್ಲರು ಮಳೆ ನೀರನ್ನು ಸಂರಕ್ಷಿಸಲು ಅನೇಕ ಗುಂಡಿಗಳನ್ನು ಅಗೆದರು. ನೀರಿನ ಕೊಯ್ಲು ಮಾದರಿಗಳನ್ನು ರಚಿಸಿದರು. ಈ ಕೆಲಸಕ್ಕೆ ಅವರು ಯಾವುದೇ ಸಂಬಳವನ್ನು ಪಡೆಯಲಿಲ್ಲ. ಆದರೆ ಅದನ್ನು ತಮ್ಮ ಸಮುದಾಯ ಮತ್ತು ಪರಿಸರದ ಬಗ್ಗೆ ತಮ್ಮ ಕರ್ತವ್ಯವೆಂದು ಮಾಡಿದರು. ಹಲ್ಮಾ ಸಂಪ್ರದಾಯದಲ್ಲಿ ಭೂಮಿ ತಾಯಿಗೆ ಸೇವೆ ಸಲ್ಲಿಸುವುದು ಇದರ ಉದ್ದೇಶವಾಗಿದೆ. ೨೦೧೯ ರಲ್ಲಿ ಶಿವಗಂಗಾ ಚಳುವಳಿಯ ಶ್ರೀ ಮಹೇಶ್ ಶರ್ಮಾ ಅವರನ್ನು ಭಿಲ್ ಸಮುದಾಯದ ಪ್ರಗತಿಪರ ಕೆಲಸಕ್ಕಾಗಿ 'ಪದ್ಮಶ್ರೀ ಪ್ರಶಸ್ತಿ' ನೀಡಿ ಗೌರವಿಸಲಾಯಿತು.
- ೨೦೧೫ ರ ಚೆನ್ನೈ ಪ್ರವಾಹದ ಸಮಯದಲ್ಲಿ, ರಸ್ತೆಗಳು ನದಿಗಳಾಗಿ ಮಾರ್ಪಟ್ಟಿದ್ದವು, ಜನರು ಜೀವನವನ್ನು ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಬಹುತೇಕ ಎಲ್ಲಾ ಅಂಗಡಿಗಳು ಮುಚ್ಚಲ್ಪಟ್ಟಿದ್ದವು, ಸಾರ್ವಜನಿಕ ಸೇವೆಗಳಿಗೆ ಅಡ್ಡಿಯಾಯಿತು. ಅನೇಕ ಖಾಸಗಿ ಗುಂಪುಗಳು, ವಿಶೇಷವಾಗಿ ಆಧ್ಯಾತ್ಮಿಕ ಮತ್ತು ಧಾರ್ಮಿಕ ಸಂಸ್ಥೆಗಳು ದೊಡ್ಡ ಪ್ರಮಾಣದ ಆಹಾರವನ್ನು ಬೇಯಿಸಿ ಅಗತ್ಯವಿರುವ ಜನರಿಗೆ ಹಂಚುವ ಕೆಲಸವನ್ನು ಮಾಡಿದವು.
- ಪ್ರತಿಫಲವಾಗಿ ಏನನ್ನೂ ನಿರೀಕ್ಷಿಸದೆ ಸಮುದಾಯದ ಪ್ರಯೋಜನಕ್ಕಾಗಿ ಏನನ್ನಾದರೂ ಮಾಡಲು ಜನರು ಒಗ್ಗೂಡಿದ ಇನ್ನೂ ಅನೇಕ ಉದಾಹರಣೆಗಳಿವೆ. ನೀವು ಯಾವುದನ್ನಾದರೂ ಕೇಳಿದ್ದೀರಾ?

ಮೇಲಿನ ನಿಜ ಜೀವನದ ಕಥೆಗಳು ಗ್ರಾಮೀಣ ಸನ್ನಿವೇಶದ ಸಮುದಾಯದ ಚಿತ್ರಣವನ್ನು ನೀಡುತ್ತವೆ. ಅಂತಹ ಸಮುದಾಯಗಳು ನಗರ ಪ್ರದೇಶಗಳಲ್ಲಿಯೂ ಇವೆ. ಆದರೆ ಅವು ಸ್ವಲ್ಪ ವಿಭಿನ್ನವಾಗಿ ಕಾರ್ಯನಿರ್ವಹಿಸಬಹುದು. ಮತ್ತೊಂದು ನಿಜ ಜೀವನದ ಕಥೆಯಿಂದ ಒಂದು ಉದಾಹರಣೆಯನ್ನು ನೋಡೋಣ.

© NCERT not to be republished











ಗುಜರಾತನ ಅಹಮದಾಬಾದ್ ಪ್ರದೇಶದಲ್ಲಿ ಸುಮಾರು ೨೦ ವರ್ಷಗಳ ಹಿಂದೆ, ಸಣ್ಣ ಆಟೋ-ಫ್ಯಾಬ್ರಿಕೇಶನ್ ಕಾರ್ಯಾಗಾರದ ಮಾಲೀಕರಾದ ಕಮಲ್ ಪರ್ಮಾರ್, ಬೀದಿಗಳಲ್ಲಿ ಹಿಂದುಳಿದ/ದಿನದಲಿತ ಮಕ್ಕಳ ಗುಂಪನ್ನು ಗಮನಿಸಿದರು. ಅವರಲ್ಲಿ ಕೆಲವರು ಶಾಲೆಯಿಂದ ತೊರೆದಿದ್ದರು. ಇತರರು ಎಂದಿಗೂ ಶಾಲೆಗೆ ಹೋಗಿರಲಿಲ್ಲ. ಕಮಲ್ ತನ್ನ ನಿಯಮಿತ ಕೆಲಸದ ಸಮಯದ ನಂತರ ಪ್ರತಿದಿನ ಸಂಜೆ ೫:೩೦ ರಿಂದ ೯:೪೫ ರವರೆಗೆ ಅವರಿಗೆ ತರಬೇತಿ-(ಟ್ಯೂಷನ್) ನೀಡಲು ಪ್ರಾರಂಭಿಸಿದನು. ಅವರು ಮಕ್ಕಳಿಗೆ ಉಚಿತ ಭೋಜನವನ್ನು ಸಹ ನೀಡಿದರು. ಕಡಿಮೆ ಅವಧಿಯಲ್ಲಿ ೧೫೦ ಮಕ್ಕಳು ತರಗತಿಗಳಿಗೆ ಹಾಜರಾಗುತ್ತಿದ್ದರು ಮತ್ತು ಪಾಠಗಳಲ್ಲಿ ಆಳವಾದ ಆಸಕ್ತಿ ಹೊಂದಿದ್ದರು!

ಸ್ಥಳೀಯ ಶಾಲೆಯೊಂದರಲ್ಲಿನ ಕೆಲವು ಶಿಕ್ಷಕರು ತರಗತಿಗಳನ್ನು ಗಮನಿಸಿ ಸ್ವಲ್ಪ ಸಮಯದವರೆಗೆ ಕಲಿಸಲು ಸೇರಿಕೊಂಡರು. ಅವರಲ್ಲಿ ಒಬ್ಬರು ಗಮನಿಸಿದರು "ಈ ಮಕ್ಕಳಿಗೆ ಕುಳಿತುಕೊಳ್ಳಲು ಸರಿಯಾದ ಬೆಂಚುಗಳಿಲ್ಲ. 'ಶಾಂತ ವಲಯ'ದ ತರಗತಿ ಕೊಠಡಿಗಳಿಲ್ಲ. ಹಾದುಹೋಗುವ ವಾಹನಗಳು ಸಾಕಷ್ಟು ಶಬ್ದ ಮಾಡುತ್ತವೆ. ಆದರೂ ಅವರು ಶಿಕ್ಷಕರು ಏನು ಹೇಳುತ್ತಾರೆಂಬುದರ ಬಗ್ಗೆ ಗಮನ ಹರಿಸುತ್ತಾರೆ. ಇದು ನಮ್ಮ ಹೃದಯವನ್ನು ಸ್ಪರ್ಶಿಸಿತ್ತು. ಅವರಿಂದ ನಮಗೆ ದೊರೆತ ಪ್ರೀತಿ ಮತ್ತು ವಾತ್ಸಲ್ಯ ನಂಬಲಸಾಧ್ಯವಾಗಿತ್ತು" ಎಮದು ಬರೆದುಕೊಂಡಿದ್ದಾರೆ. ನಿಯಮಿತ ಶಾಲೆಗಳಿಗೆ ಹೋಗುತ್ತಿದ್ದ ಕೆಲವು ಹಿರಿಯ ಮಕ್ಕಳು ಸಹ ಕಮಲ್ ಅವರ ತರಗತಿಗಳಲ್ಲಿ ಕಲಿಸಲು ಸ್ವಯಂಸೇವಕರಾಗಿ ಸೇರಿಕೊಂಡರು. ಅವರಲ್ಲಿ ಒಬ್ಬರ, "ನಾವು ಅಲ್ಲಿಗೆ ಕಲಿಸಲು ಹೋಗಿದೆವು, ಆದರೆ ಬದಲಿಗೆ ನಾವು ಅವರಿಂದ ಬಹಳಷ್ಟು ಕಲಿತಿದ್ದೇವೆ" ಎಂದು ಹೇಳಿದರು.




- ಈ ಕಥೆಯನ್ನು ನಿಮ್ಮ ತರಗತಿಯಲ್ಲಿ ಚರ್ಚಿಸಿ. ಇದು ಸಮುದಾಯದ ಬಗ್ಗೆ ಯಾವ ರೀತಿಯ ಮನೋಭಾವವನ್ನು ಬಹಿರಂಗಪಡಿಸುತ್ತದೆ?
- ಕಮಲ್ ಪರ್ಮಾರ್ ಅವರ ಪ್ರವೃತ್ತಿಯಲ್ಲಿ ಯಾವ ಮೌಲ್ಯಗಳು ಪ್ರತಿಫಲಿಸುತ್ತವೆ?
- ಆ ದೀನದಲಿತ ಮಕ್ಕಳ ಬಗ್ಗೆ ಯೋಚಿಸಿ. ಸಮಾಜವು ಅವರಿಗೆ ಅನ್ಯಾಯ ಮಾಡಿದೆ ಎಂದು ಭಾವಿಸುವಿರಾ?



© NCERT not to be republished

- ಎಲ್ಲಾ ಮಕ್ಕಳು ಶಿಕ್ಷಣ ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಸಮಾಜವು ಏನು ಮಾಡಬೇಕು?

ಕಳೆದ ೩೦ ಅಥವಾ ೪೦ ವರ್ಷಗಳಲ್ಲಿ ಹೊಸ ರೀತಿಯ ಸಮುದಾಯಗಳು ಸಹ ಹೊರಹೊಮ್ಮಿವೆ. ಅನೇಕ ನಗರ ಪ್ರದೇಶಗಳಲ್ಲಿನ ನಿವಾಸಿಗಳ ಕಲ್ಯಾಣ ಸಂಘಗಳು ತಮ್ಮದೇ ಆದ ನಿಯಮಗಳು ಮತ್ತು ನಿಬಂಧನೆಗಳನ್ನು ಮಾಡುವ ಸಮುದಾಯಗಳಿಗೆ ಉದಾಹರಣೆಗಳಾಗಿವೆ. ಅವು ತ್ಯಾಜ್ಯ ನಿರ್ವಹಣೆ, ಸಾಮಾನ್ಯ ಪ್ರದೇಶಗಳ ಸ್ವಚ್ಛತೆ, ಸಾಕುಪ್ರಾಣಿಗಳ ಆರೈಕೆ ಇತ್ಯಾದಿಗಳ ಬಗ್ಗೆ ನಿಯಮಗಳಾಗಿರಬಹುದು. ಸಮುದಾಯದಲ್ಲಿ ವಾಸಿಸುವ ಜನರು ಅಂತಹ ನಿಯಮಗಳು ಮತ್ತು ನಿಬಂಧನೆಗಳನ್ನು ಮಾಡುವಲ್ಲಿ ಭಾಗವಹಿಸುತ್ತಾರೆ.

ಸಮುದಾಯಗಳು ಅಂತಿಮವಾಗಿ ಪರಸ್ಪರ ಅವಲಂಬಿತವಾಗಿವೆ. ಉದಾಹರಣೆಗೆ, ಅದೇ ನಿವಾಸಿಗಳ ಕಲ್ಯಾಣ ಸಂಘಗಳು ಈ ಕೆಳಗಿನವುಗಳನ್ನು ಅವಲಂಬಿಸಿರುತ್ತವೆ ಸರಬರಾಜುಗಳಿಗಾಗಿ ವ್ಯಾಪಾರಿ ಸಮುದಾಯ ಮತ್ತು ತ್ಯಾಜ್ಯವನ್ನು ನಿರ್ವಹಿಸಲು ಪುರಸಭೆಯ ಕಾರ್ಮಿಕರ ಮೇಲೆ. ನಮ್ಮ ಸಂಕೀರ್ಣ ಸಮಾಜಗಳಲ್ಲಿ, ಪ್ರತಿಯೊಬ್ಬರೂ ಹಲವಾರು ಇತರ ಜನರು ಮತ್ತು ಸಮುದಾಯಗಳನ್ನು ಅವಲಂಬಿಸಿದ್ದಾರೆ.



## ನಾವೀಗ ಅನ್ವೇಷಿಸೋಣ

ನಿಮ್ಮ ಕುಟುಂಬದ ಹೊರಗಿನ ಎಲ್ಲಾ ಜನರು, ತಮ್ಮ ಕೆಲಸದ ಮೂಲಕ ಒಂದಲ್ಲ ಒಂದು ರೀತಿಯಲ್ಲಿ ನಿಮ್ಮನ್ನು ಹೇಗೆಲ್ಲಾ ಬೆಂಬಲಿಸುತ್ತಿದ್ದಾರೆ ಎಂಬುದರ ಒಂದು ಪಟ್ಟಿಯನ್ನು ಮಾಡಿ.

'ಸಮುದಾಯ' ಎಂಬುದು ಹೊಂದಿಕೊಳ್ಳುವ ಪರಿಕಲ್ಪನೆ ಎಂದು ನಾವು ಈಗ ಅರ್ಥಮಾಡಿಕೊಂಡಿದ್ದೇವೆ. ಇನ್ನೂ ಕೆಲವು ಉದಾಹರಣೆಗಳು:

- ಒಂದು ಜಾತಿ, ಅಥವಾ ಅದರ ಉಪವಿಭಾಗವನ್ನು ಕೆವು ಭಾರಿ ಸಮುದಾಯ ಎಂದೂ ಕರೆಯಲಾಗುತ್ತದೆ.

© NCERT not to be republished

- ಒಂದು ನಿರ್ದಿಷ್ಟ ಧರ್ಮ, ಪ್ರದೇಶ, ಕೆಲಸ ಅಥವಾ ಆಸಕ್ತ ಜನರ ಗುಂಪು. ವಿಶೇಷವಾಗಿ ಒಂದು ಸಣ್ಣ ಗುಂಪನ್ನು ಸಮುದಾಯ ಎಂದೂ ಕರೆಯಬಹುದು; ಉದಾಹರಣೆಗೆ, ಮುಂಬೈನ ಪಾರ್ಸಿ ಸಮುದಾಯ, ಚೆನ್ನೈನ ಸಿಖ್ ಸಮುದಾಯ, 'ಅಮೆರಿಕದ ಭಾರತೀಯ ಸಮುದಾಯ, 'ಕೇರಳದ ವೈಚಾರಿಕ ಸಮುದಾಯ', 'ನಮ್ಮ ಶಾಲೆಯ ಕಲಾ ಸಮುದಾಯ, ಹಳ್ಳಿಯ ಕೃಷಿ ಸಮುದಾಯ', ಇತ್ಯಾದಿ... ಈ ಬಗೆಯ ಪಟ್ಟಿಗೆ ಅಂತ್ಯವಿಲ್ಲ!
- ನಿಮ್ಮ ಶಾಲೆಯಲ್ಲಿ ನೀವು ವಿವಿಧ ಸಮುದಾಯಗಳ ಭಾಗವಾಗಿರಬಹುದು. ನಿಮ್ಮ ತರಗತಿಯು ಕ್ರೀಡಾ ಸಮುದಾಯ, ರಾಷ್ಟ್ರೀಯ ಸೇವಾ ಯೋಜನೆ, ರಾಷ್ಟ್ರೀಯ ಸೇವಾ ದಳ, ವಿಜ್ಞಾನ ಅಥವಾ ನಾಟಕ ಕ್ಲಬ್ ಇತ್ಯಾದಿಗಳು.

## ನಾವೀಗ ಅನ್ವೇಷಿಸೋಣ

→ ನೀವು ಯಾವ ರೀತಿಯ ಸಮುದಾಯಗಳ ಭಾಗವಾಗಿದ್ದೀರಿ?

→ ನಿಮ್ಮ ಶಾಲೆಯಲ್ಲಿ ನೀವು ಭಾಗವಾಗಿರುವ ಕ್ಲಬ್ ಇದೆಯೇ? ಇದು ಹೇಗೆ ಕಾರ್ಯನಿರ್ವಹಿಸುತ್ತದೆ?

## ನಾವು ಮುಂದುವರಿಯುವ ಮೊದಲು...

→ ಕುಟುಂಬವು ಮಾನವ ಸಮಾಜದ ಅಡಿಪಾಯವಾಗಿದೆ. ತಾತ್ತ್ವಿಕವಾಗಿ, ಕುಟುಂಬದ ಸದಸ್ಯರು ತಮ್ಮ ಅನೇಕ ಕರ್ತವ್ಯಗಳು ಮತ್ತು ಕಾರ್ಯಗಳಲ್ಲಿ ಪರಸ್ಪರ ಬೆಂಬಲಿಸುತ್ತಾರೆ.

→ ಸಮುದಾಯ, ಒಂದು ದೊಡ್ಡ ಘಟಕ, ಜನರು ಪರಸ್ಪರ ಬೆಂಬಲಿಸಲು ತಮ್ಮ ಕೈಲಾದಷ್ಟು ಪ್ರಯತ್ನಿಸುತ್ತಾರೆ ಎಂದು ಸೂಚಿಸುತ್ತದೆ. 'ಸಮುದಾಯ'ವನ್ನು ಹಲವಾರು ರೀತಿಯಲ್ಲಿ ವ್ಯಾಖ್ಯಾನಿಸಬಹುದು ಮತ್ತು ಅನೇಕ ರೀತಿಯ ಸಮುದಾಯಗಳಿವೆ.

→ ಅಂತಿಮವಾಗಿ, ಸಮುದಾಯಗಳು ಪರಸ್ಪರ ಅವಲಂಬಿತವಾಗಿವೆ.

## ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

೧. ನಿಮ್ಮ ಕುಟುಂಬ ಮತ್ತು ನೆರೆಹೊರೆಯಲ್ಲಿ ನೀವು ಅನುಸರಿಸುವ ಕೆಲವು ನಿಯಮಗಳು ಯಾವುವು? ಅವು ಏಕೆ ಮುಖ್ಯ?

೨. ಕೆಲವು ನಿಯಮಗಳಿಂದ ಕುಟುಂಬ ಅಥವಾ ಸಮುದಾಯದ ಕೆಲವು ಜನರಿಗೆ ಅನ್ಯಾಯವಾಗಿದೆ ಎಂದು ನೀವು ಭಾವಿಸುತ್ತೀರಾ? ಹಾಗೆನಿಸಿದರೆ ಏಕೆ?

೩. ಸಮುದಾಯದ ಬೆಂಬಲವು ವ್ಯತ್ಯಾಸವನ್ನುಂಟು ಮಾಡುವ ಹಲವಾರು ಸಂದರ್ಭಗಳನ್ನು ನೀವು ಗಮನಿಸಿದ್ದೀರಿ. ಇವುಗಳ ಬಗ್ಗೆ ನೀವು ಚಿತ್ರ ಬಿಡಿಸಬಹುದು ಅಥವಾ ಬರೆಯಬಹುದು.

© NCERT not to be republished